ಶ್ರೀ ಎಸ್.ಎ. ರವೀಂದ್ರನಾಥ್: ಮಾನ್ಯ ಅಧ್ಯಕ್ಷರೆ, ದಿನಾಂಕ 3ನೇ ಏಪ್ರಿಲ್ 2010 ರಲ್ಲಿ ರೂಲ್ 64 ಅಡಿಯಲ್ಲಿ ಎನ್‌ಕ್ವೈರಿ ಮಾಡುವುದಕ್ಕೆ ಒಂದು ಕಮಿಟಿಯನ್ನು ನೇಮಕ ಮಾಡಲಾಗಿತ್ತು. ಅದರ ಅವಧಿ ಒಂದು ವರ್ಷವಿದೆ. ಇನ್ನೊಂದು ತಿಂಗಳಲ್ಲಿ ಅದರ ಅವಧಿ ಮುಗಿಯುತ್ತದೆ. ಅಷ್ಟರೊಳಗೆ ಆ ಕಮಿಟಿಯವರು ಆ ಕಾರ್ಖಾನೆಯಲ್ಲಿ ಏನೇನು ಅವ್ಯವಹಾರವಾಗಿದೆ ಎಂಬ ಬಗ್ಗೆ ವರದಿಯೇನು ಕೊಡುತ್ತಾರೆ ಅದರ ಮೇಲೆ ತುರ್ತಾಗಿ ಕ್ರಮ ತೆಗೆದುಕೊಳ್ಳುವ ಕೆಲಸವನ್ನು ಮಾಡುತ್ತೇನೆ.

ಸಹಕಾರ ಸಂಘದಲ್ಲಿ ನೌಕರರಲ್ಲದವರಿಗೆ ನಿವೇಶನ ಹಂಚಿಕೆ

74 (629) ಶ್ರೀ ಹೆಚ್.ಡಿ. ರೇವಣ್ಣ (ಹೊಳೆನರಸೀಪುರ): ಮಾನ್ಯ ಸಹಕಾರ ಮತ್ತು ಕೃಷಿ ಮಾರುಕಟ್ಟೆ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ಕರ್ನಾಟಕ ರಾಜ್ಯ ಗ್ರೂಪ್ 'ಡಿ' ನೌಕರರ ಗೃಹ ನಿರ್ಮಾಣ ಸಹಕಾರ ಸಂಘದಲ್ಲಿ ನೌಕರರಲ್ಲದವರಿಗೆ ನಿವೇಶನ ಹಂಚಿಕೆ ಮಾಡಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ ;

ಆ) ಹಾಗಿದ್ದಲ್ಲಿ, ಈಗಾಗಲೇ ಹಂಚಿಕೆ ಮಾಡಿರುವ ನಿವೇಶನಗಳ ಸಂಖ್ಯೆ ಎಷ್ಟು ;

ಇ) ಈ ಪೈಕಿ ಸಹಕಾರ ಇಲಾಖೆ ಹಾಗೂ ಸಹಕಾರ ಲೆಕ್ಕಪರಿಶೋಧನೆ ಇಲಾಖೆಯ ಸಿಬ್ಬಂದಿಗಳು ಹಾಗೂ ಅಧಿಕಾರಿಗಳು ಪಡೆದಿರುವ ನಿವೇಶನಗಳ ಸಂಖ್ಯೆ ಎಷ್ಟು ?

ಶ್ರೀ ಲಕ್ಷ್ಮಣ ಸವದಿ (ಸಹಕಾರ ಮತ್ತು ಕೃಷಿ ಮಾರುಕಟ್ಟೆ ಸಚಿವರು):

ಅ) ಹೌದು.

ದಿ ಕರ್ನಾಟಕ ಗೌರ್ನಮೆಂಟ್ ಕ್ಲಾಸ್ 'ಡಿ' ಎಂಪ್ಲಾಯೀಸ್ ಹೌಸ್ ಬಿಲ್ಡಿಂಗ್ ಕೋ–ಆಪರೇಟಿವ್ ಸೊಸೈಟಿ ಲಿಮಿಟೆಡ್, ಬೆಂಗಳೂರು ಇದರ ಬೈಲಾದ ಪ್ರಕಾರ ನೌಕರರಲ್ಲದವರಿಗೆ ಸಹ ಸದಸ್ಯತ್ವ ನೀಡಿ ನಿವೇಶನ ಹಂಚಿಕೆ ಮಾಡಲು ಅವಕಾಶವಿರುವುದರಿಂದ ಈ ಸಂಘವು ನೌಕರರಲ್ಲದ ಸಹ ಸದಸ್ಯರಿಗೂ ನಿವೇಶನಗಳನ್ನು ಹಂಚಿಕೆ ಮಾಡಿರುತ್ತದೆ.

ಆ) ಸಂಘವು ನಿರ್ಮಿಸಿರುವ ಎರಡು ಬಡಾವಣೆಗಳಿಂದ ನೌಕರರಲ್ಲದ ಸಹ ಸದಸ್ಯರಿಗೆ 1361 ನಿವೇಶನಗಳನ್ನು ಹಂಚಿಕೆ ಮಾಡಲಾಗಿರುತ್ತದೆ.

ಇ) ಸಂಘದ ಸದಸ್ಯತ್ವ ಹೊಂದಿ ಸಂಘದಿಂದ ನಿವೇಶನ ಪಡೆದಿರುವ ಅಧಿಕಾರಿ ಮತ್ತು ಸಿಬ್ಬಂದಿಗಳ ವಿವರ ಈ ಕೆಳಗಿನಂತಿವೆ:

1. ಸಹಕಾರ ಇಲಾಖೆ – 20

2. ಸಹಕಾರ ಲೆಕ್ಕಪರಿಶೋಧನಾ ಇಲಾಖೆ – 06

ಶ್ರೀ ಹೆಚ್.ಡಿ. ರೇವಣ್ಣ: ಮಾನ್ಯ ಅಧ್ಯಕ್ಷರೆ, ಕರ್ನಾಟಕ ರಾಜ್ಯದಲ್ಲಿ 'ಡಿ' ಗ್ರೂಪ್ ನೌಕರರ ಸಹಕಾರಿ ಸಂಘವೆಂದು ಒಂದು ಸಂಘವನ್ನು ಮಾಡಿದ್ದಾರೆ. ಆ ಸಂಘ 'ಡಿ' ಗ್ರೂಪ್ ನೌಕರರಿಗೇ ನಿವೇಶನವನ್ನು ಹಂಚಿಕೆ ಮಾಡಬೇಕು. ನಾನು ಮಾನ್ಯ ಸಚಿವರಲ್ಲಿ ಕೇಳಿರುವ ಪ್ರಶ್ನೆ ಏನೆಂದರೆ, 'ಡಿ' ಗ್ರೂಪ್ ನೌಕರರಲ್ಲದ ಎಷ್ಟು ಜನರಿಗೆ ನಿವೇಶನವನ್ನು ಕೊಡಲಾಗಿದೆ ಎಂದು ಕೇಳಿದ್ದೇನೆ. ಆ ಸಂಘ ಆಗಿರುವ ಮೂಲ ಉದ್ದೇಶವೇ 'ಡಿ' ಗ್ರೂಪ್ ನೌಕರರಿಗೆ ನಿವೇಶನ ಕೊಡಬೇಕೆಂದು. 'ಡಿ' ಗ್ರೂಪ್ ನೌಕರರಲ್ಲದ 1361 ಸಹ ಸದಸ್ಯರಿಗೆ ಕೊಟ್ಟಿದ್ದೇವೆಂದು ಹೇಳುತ್ತಾರೆ. ಅದೇ ರೀತಿ ಸಹಕಾರ ಇಲಾಖೆಯಲ್ಲಿ ಕೆಲಸ ಮಾಡುವವರಿಗೆ, ಆಡಿಟ್‌ನಲ್ಲಿ ಕೆಲಸ ಮಾಡುವ 26 ಜನರಿಗೆ, ಹೀಗೆ ಇಂಥವರಿಗೆಲ್ಲಾ ನಿವೇಶನ ಕೊಟ್ಟಿದ್ದಾರೆಂದರೆ ಅರ್ಥವೇನು? ಸಾಮಾನ್ಯ 'ಡಿ' ಗ್ರೂಪ್ ನೌಕರರಿಗೆ ಸಿಗುವಂಥ ನಿವೇಶನ

ಸಿಗದೇ ಆ ನೌಕರರು ನಿವೇಶನ ವಂಚಿತರಾಗುವುದಿಲ್ಲವೆ ಎನ್ನುವಂಥ ಪ್ರಶ್ನೆಯನ್ನು ನಾನು ಮಾನ್ಯ ಸಹಕಾರ ಸಚಿವರಲ್ಲಿ ಕೇಳುತ್ತಿದ್ದೇನೆ. ಕಾನೂನು ಬಾಹಿರವಾಗಿ ಕೊಟ್ಟಿರುವಂತಹ ನಿವೇಶನಗಳನ್ನು ಮುಟ್ಟುಗೋಲು ಹಾಕಿಕೊಂಡು 'ಡಿ' ಗ್ರೂಪ್ ನೌಕರರಿಗಾಗಿ ಸಂಘ ಏನು ಮಾಡಿದೆ ಅವರಿಗೆ ನಿವೇಶನವನ್ನು ಕೊಡುವುದಕ್ಕೆ ಸಹಕಾರ ಸಚಿವರು ಕ್ರಮ ತೆಗೆದು ಕೊಳ್ಳುತ್ತಾರೆಯೇ? ಇದರ ಬಗ್ಗೆ ಸಮಗ್ರವಾಗಿ ತನಿಖೆ ಮಾಡುತ್ತಾರೆಯೇ ಎಂದು ತಿಳಿಸಬೇಕು.

ಶ್ರೀ ಲಕ್ಷ್ಮಣ ಸಂಗಪ್ಪ ಸವದಿ: ಮಾನ್ಯ ಅಧ್ಯಕ್ಷರೆ, 'ಡಿ' ಗ್ರೂಪ್ ನೌಕರರ ಸಹಕಾರಿ ಸಂಘದಲ್ಲಿ ಸದಸ್ಯರಲ್ಲದಿರುವಂತಹ ಜನರಿಗೆ ಸೈಟುಗಳನ್ನು ಕೊಟ್ಟಿದ್ದಾರೆನ್ನುವಂತಹ ಭಾವನೆಯನ್ನು ಮಾನ್ಯ ಸದಸ್ಯರು ವ್ಯಕ್ತಪಡಿಸಿದ್ದಾರೆ. ಆ ರೀತಿ ಕೊಡುವುದಕ್ಕೆ ಕಾನೂನಿನಲ್ಲಿ ಅವಕಾಶ ಇದೆ. ಯಾವುದೇ ಒಂದು ಗೃಹ ನಿರ್ಮಾಣ ಸಹಕಾರ ಸಂಘದಲ್ಲಿ ಸದಸ್ಯರನ್ನು ಹೊರತುಪಡಿಸಿ ಕೂಡ ಸಹ ಸದಸ್ಯರನ್ನು ಮಾಡಿಕೊಂಡು ಅವರಿಗೆ ನಿವೇಶನಗಳನ್ನು ಕೊಡುವುದಕ್ಕೆ ಅವಕಾಶವಿದೆ. ಅವರ ಆತಂಕ ಏನೆಂದರೆ ಸಹಕಾರಿ ಕ್ಷೇತ್ರದಲ್ಲಿರುವ ಆಡಿಟ್ ಮಾಡುವಂತಹ ಅಧಿಕಾರಿಗಳು ನಿವೇಶನವನ್ನು ಪಡೆದುಕೊಂಡಿದ್ದಾರೆ.

ಶ್ರೀ ಡಿ.ಕೆ. ಶಿವಕುಮಾರ್: ಮಾನ್ಯ ಅಧ್ಯಕ್ಷರೆ, ಹುಣಸೂರಿನವರು Co-operation Minister ಆಗಿದ್ದಾಗ ನೀವೇ associate member ಮಾಡುವುದಕ್ಕೆ ಜಿ.ಟಿ. ದೇವೇಗೌಡರ ಕೈಯಲ್ಲಿ ಪ್ರಸ್ತಾವನೆ ಮಾಡಿಸಿರುವುದು ನನಗೂ ನೆನಪಿದೆ.

ಶ್ರೀ ಹೆಚ್.ಡಿ. ರೇವಣ್ಣ: ಮಾನ್ಯ ಅಧ್ಯಕ್ಷರೆ, ನಾನು ಪ್ರಸ್ತಾವನೆ ಮಾಡಿಸುವುದಕ್ಕೆ ಹೋಗಿಲ್ಲ. ನಾನು ಪ್ರಸ್ತಾವನೆ ಕೊಟ್ಟಿಲ್ಲ.

ಶ್ರೀ ಡಿ.ಕೆ. ಶಿವಕುಮಾರ್: ನೀವಲ್ಲ, ಆಗ ಇದ್ದಂತಹ Co-operation Minister.

ಶ್ರೀ ಹೆಚ್.ಡಿ. ರೇವಣ್ಣ: 'ಡಿ' ಗ್ರೂಪ್ ನೌಕರರಿಗೆ ಅನ್ಯಾಯ ವಾಗಿರುವುದರಿಂದ ಅದನ್ನು ಸರಿಪಡಿಸಿ ಎಂದು ಕೇಳುತ್ತಿದ್ದೇನೆ.

ಶ್ರೀ ಟಿ.ಬಿ. ಜಯಚಂದ್ರ: ಮಾನ್ಯ ರೇವಣ್ಣನವರು ಹಾಗೂ ಮಾನ್ಯ ಶಿವಕುಮಾರ್‌ರವರು ಯಾವಾಗ co ಇರುತ್ತಾರೋ ಯಾವಾಗ operation ಆಗಿ ಇರುತ್ತಾರೋ ಗೊತ್ತಾಗುವುದಿಲ್ಲ.

ಶ್ರೀ ಲಕ್ಷ್ಮಣ ಸಂಗಪ್ಪ ಸವದಿ: ಇಲ್ಲ, ಅದು ಏನಾಗಿತ್ತು ಎಂದರೆ ಹಿಂದೆ Co-operation Minister ಇದ್ದರು. ಅವರು Co-operation Minister ಆದಮೇಲೆ ಇನ್ನೊಬ್ಬರು Co-operation Minister ಆದಾಗ ಅದರ in charge ಅವರು ಮಾಡುತ್ತಿದ್ದರು. ಆ ರೀತಿ in charge ಮಾಡುವಂತಹ ಸಂದರ್ಭದಲ್ಲಿ ಕೆಲವೊಂದು ಸಲಹೆಗಳನ್ನು ಕೊಟ್ಟು .....

ಶ್ರೀ ಹೆಚ್.ಡಿ. ರೇವಣ್ಣ: ಮಾನ್ಯ ಅಧ್ಯಕ್ಷರೆ, ನಾನು ಆ ಕೆಲಸ ಮಾಡುತ್ತಿರಲಿಲ್ಲ. ನೀವು in charge ಮಾಡುತ್ತಿದ್ದರು ಎಂದು ಹೇಳಿರುವುದನ್ನು ದಯವಿಟ್ಟು ವಾಪಸ್ಸು ತೆಗೆದುಕೊಳ್ಳಬೇಕು. ನಾನು ಒಂದು ವಿಚಾರ ಹೇಳುತ್ತೇನೆ, ಮಾನ್ಯ ಕುಮಾರಸ್ವಾಮಿಯವರು ಮುಖ್ಯಮಂತ್ರಿ ಯಾಗಿದ್ದಾಗ ನೀವು ಯಾರ in charge ಕೆಲಸ ಮಾಡುತ್ತಿದ್ದಿರಿ? ಮಾನ್ಯ ಯಡಿಯೂರಪ್ಪನವರ ಬಗ್ಗೆ ಯಾರು in charge ಕೆಲಸ ಮಾಡುತ್ತಿದ್ದರು ಎನ್ನುವುದನ್ನು ದಯಮಾಡಿ ಸದನಕ್ಕೆ ಹೇಳಿ.

ಅಧ್ಯಕ್ಷರು: ವಿಷಯಾಂತರ ಬೇಡ.

ಶ್ರೀ ಹೆಚ್.ಡಿ. ರೇವಣ್ಣ: ಮಾನ್ಯ ಅಧ್ಯಕ್ಷರೆ, In charge ಮಾಡುತ್ತಿದ್ದರು ಎಂದರೆ ಅದರ ಅರ್ಥ ಏನು? ನೀವು ಸದನದಲ್ಲಿ prove ಮಾಡಿಬಿಡಿ.

ಶ್ರೀ ಲಕ್ಷ್ಮಣ ಸಂಗಪ್ಪ ಸವದಿ: ಮಾನ್ಯ ಅಧ್ಯಕ್ಷರೇ, "ಕುಂಬಳಕಾಯಿ ಕಳ್ಳ ಎಂದರೆ ಗಪ್ಪನೆ ಹೆಗಲ ಮೇಲೆ ಕೈ ಹಾಕುತ್ತಾರೆ."

ಶ್ರೀ ಹೆಚ್.ಡಿ. ರೇವಣ್ಣ: ನನ್ನನ್ನು ಏಕೆ ಕಳ್ಳ ಎಂದು ಹೇಳುವುದು, ಕಳ್ಳ ಎನ್ನುವುದನ್ನು ವಾಪಸ್ಸು ತೆಗೆದುಕೊಳ್ಳಿ.

ಅಧ್ಯಕ್ಷರು: ದಯವಿಟ್ಟು ವಿಷಯಾಂತರ ಬೇಡ.

ಶ್ರೀ ಹೆಚ್.ಡಿ. ರೇವಣ್ಣ: ಮಾನ್ಯ ಕುಮಾರಸ್ವಾಮಿಯವರು ಮುಖ್ಯಮಂತ್ರಿಯಾಗಿದ್ದಾಗ ನೀವು ಏನು ಕೆಲಸ ಮಾಡುತ್ತಿದ್ದಿರಿ ಎನ್ನುವುದನ್ನು ಸಭೆಯ ಗಮನಕ್ಕೆ ತರುವುದಕ್ಕೆ ಚರ್ಚೆ ಮಾಡುವುದಕ್ಕೆ ಅವಕಾಶ ಕೊಡಿ. ನಾನು ಮಾತನಾಡುವುದಕ್ಕೆ ತಯಾರಿದ್ದೇನೆ. ಅದನ್ನು ಬಿಟ್ಟು ನೀವು ಯಾವುದನ್ನೋ ಹೇಳುವುದಕ್ಕೆ ಹೋಗಬೇಡಿ. ನಾನು ನನ್ನ ಜೀವನದಲ್ಲಿ ಕಾನೂನು ಬಾಹಿರವಾಗಿ ಯಾವುದನ್ನೂ ಮಾಡುವುದಕ್ಕೆ ಹೋಗಿಲ್ಲ.

ಶ್ರೀ ಲಕ್ಷ್ಮಣ ಸಂಗಪ್ಪ ಸವದಿ: ಮಾನ್ಯ ರೇವಣ್ಣನವರು ಏಕೋ ಕೋಪ ಮಾಡಿಕೊಂಡಿದ್ದಾರೆ. ಅವರಿಗೆ ಎಲ್ಲೋ ಅಪಾರ್ಥವಾಯಿತು ಎಂದು ತಿಳಿದುಕೊಂಡಿದ್ದೇನೆ.

ಡಾ: ಹೆಚ್.ಸಿ. ಮಹದೇವಪ್ಪ: ನಮ್ಮ ರೇವಣ್ಣನವರ ಮನಸ್ಸನ್ನು ನೋಯಿಸದೆ ನೇರವಾಗಿ ಉತ್ತರ ಕೊಟ್ಟುಬಿಡಿ.

(ಗೊಂದಲ)

ಶ್ರೀ ಲಕ್ಷ್ಮಣ ಸಂಗಪ್ಪ ಸವದಿ: ಮಾನ್ಯ ಮಹದೇವಪ್ಪನವರು ನಿಮ್ಮ ಪರವಾಗಿ ರೇವಣ್ಣನವರ ಮನಸ್ಸನ್ನು ನೋಯಿಸುವುದಕ್ಕೆ ಹೋಗಬೇಡ, ನೇರವಾಗಿ ಉತ್ತರ ಕೊಡಿ ಎಂದು ಹೇಳಿದ್ದಾರೆ. ಅವರ ಮಾತಿಗೆ ನಾನು ಬೆಲೆ ಕೊಡುತ್ತೇನೆ.

ಶ್ರೀ ಹೆಚ್.ಡಿ. ರೇವಣ್ಣ: ಮಾನ್ಯ ಅಧ್ಯಕ್ಷರೆ, 'ಡಿ' ಗ್ರೂಪ್ ನೌಕರರಿಗೆ ಎಂದು ಒಂದು ಸಂಘ ಮಾಡಿದ್ದೀರಿ. ಅವರಿಗೆ ಆದ್ಯತೆ ಕೊಡಿ ಎಂದು ನಾನು ಮನವಿ ಮಾಡುತ್ತಿದ್ದೇನೆ.

ಶ್ರೀ ಲಕ್ಷ್ಮಣ ಸಂಗಪ್ಪ ಸವದಿ: ಅಲ್ಲಿ 'ಡಿ' ಗ್ರೂಪ್ ನೌಕರರ ಸಹಕಾರ ಸಂಘ ಎಂದು ಅದಕ್ಕೆ ನಾಮಕರಣ ಆಗಿದೆ. ಆದರೆ ಅದರಲ್ಲಿ ಯಾವುದೇ ನೌಕರರು ಕೂಡ ನಿವೇಶನಗಳನ್ನು ಪಡೆದುಕೊಳ್ಳುವುದಕ್ಕೆ ಅವಕಾಶ ಇದೆ. ಅಲ್ಲಿ ಕಾನೂನು ರೀತಿಯಲ್ಲಿ ಅವರು ಸೈಟುಗಳನ್ನು ಪಡೆದುಕೊಂಡಿದ್ದಾರೆ. ಅಲ್ಲಿ ಯಾವುದೇ ರೀತಿಯ ಲೋಪಗಳಾಗಿಲ್ಲ. ನಿಮಗೆ ಅಲ್ಲಿ ಲೋಪದೋಷಗಳಾಗಿರುವುದು ಕಂಡುಬಂದಿದ್ದರೆ ಮನವರಿಕೆಯಾಗಿದ್ದರೆ ನನಗೆ ನೇರವಾಗಿ ಕಳುಹಿಸಿಕೊಡಿ. ನಾವು ತಪ್ಪಿತಸ್ಥರ ಮೇಲೆ ಕ್ರಮ ತೆಗೆದುಕೊಳ್ಳುತ್ತೇವೆ.

ರಸ್ತೆ ದುರಸ್ತಿ

75 (585) ಶ್ರೀ ತುಕಾರಾಮ್ ಇ. (ಸಂಡೂರು): ಮಾನ್ಯ ಲೋಕೋಪಯೋಗಿ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ರಾಜ್ಯ ಹೆದ್ದಾರಿ–49ರಲ್ಲಿ ಬರುವ ಸಂಡೂರು–ಹೊಸಪೇಟೆ ರಸ್ತೆಯಲ್ಲಿ ದುರಸ್ತಿ ಕಾಣದೆ ಕಳೆದ ಒಂದೂವರೆ ವರ್ಷದಿಂದ ವಾಹನ ಸಂಚಾರ ಸ್ಥಗಿತಗೊಂಡಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ ;

ಆ) ಈ ರಸ್ತೆಯನ್ನು ದುರಸ್ತಿಗೊಳಿಸಲು ಸರ್ಕಾರ ಕೈಗೊಂಡಿರುವ ಕ್ರಮಗಳೇನು ; (ಕಳೆದ ಎರಡು ವರ್ಷಗಳ ವಿವರಗಳನ್ನು ಒದಗಿಸುವುದು) ;

ಇ) ಹಾಗಿಲ್ಲದಿದ್ದಲ್ಲಿ, ಇದಕ್ಕೆ ಕಾರಣಗಳೇನು ; (ವಿವರ ನೀಡುವುದು) ?

ಶ್ರೀ ಸಿ.ಎಂ. ಉದಾಸಿ (ಲೋಕೋಪಯೋಗಿ ಸಚಿವರು):

ಅ) ರಾಜ್ಯ ಹೆದ್ದಾರಿ–49ರಲ್ಲಿ ಬರುವ ಸಂಡೂರು–ಹೊಸಪೇಟೆ ರಸ್ತೆ ಸಂಪೂರ್ಣ ಹದಗೆಟ್ಟು, ಬಸ್ಸುಗಳ ಸಂಚಾರ ಸ್ಥಗಿತಗೊಂಡಿರುವುದು ಸರ್ಕಾರದ ಗಮನಕ್ಕೆ ಬಂದಿದೆ.